ಓ ಎಸ್ ನಂ: 19/2012

ಡಿ ಡಬ್ಲ್ಯೂ : 1

ದಿನಾಂಕ 11-03-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ: ಪ್ರತಿವಾದಿ ಪರ: ಶ್ರೀ ಟಿ ಹೆಚ್ ಆರ್ ವಕೀಲರಿಂದ:</u>

ನಿಡಿ-58 ರಲ್ಲಿ ಗುರುತಿಸಿರುವ ದಾಖಲೆಯನ್ನು ನೋಡಿ ಸಾಕ್ಷಿ ನನ್ನ ತಾಯಿ ಶಾರದಮ್ಮ, ನನ್ನ ದೊಡ್ಡಪ್ಪ ಗೋವಿಂದಪ್ಪ, ನನ್ನ ಚಿಕ್ಕಪ್ಪಂದಿರುಗಳಾದ ಓಂಕಾರಪ್ಪ ಮತ್ತು ಕಲ್ಲೇಶಪ್ಪ ಹಾಗೂ ಮಹೇಶ್ ಇವರುಗಳು ಸಹಿ ಮಾಡಿರುತ್ತಾರೆ.

<u>ಪಾಟೀ ಸವಾಲು: ವಾದಿ ಪರ: ಶ್ರೀ ಕೆ ಎನ್ ಆರ್ ವಕೀಲರಿಂದ:</u>

ನಿಡಿ-58 ರ ದಾಖಲೆಗೆ ನಾನು ಸಹಿ ಮಾಡಿಲ್ಲ. ನಿಡಿ-58 ಕ್ಕೆ ಸಾಕ್ಷಿಗಳಾಗಿ ಸಹಿ ಮಾಡಿರುವ ಲೋಕೇಶಪ್ಪ, ತಿಮ್ಮಪ್ಪ, ಪರಮೇಶ್ವರಪ್ಪ ಮತ್ತು ಹನುಮಂತಪ್ಪ ಇವರ ತಂದೆ ಹೆಸರು, ವಯಸ್ಸು ಮತ್ತು ವಿಳಾಸವನ್ನು ನಮೂದಿಸಿಲ್ಲ ಎಂದರೆ ನಿಜ. ಅದೇರೀತಿ ಬಿಕಲಂದಾರರ ವಿಳಾಸವು ಸಹ ಇರುವುದಿಲ್ಲ ಎಂದರೆ ನಿಜ. ಈ ಹಿಂದೆ ಇದೇ ಪ್ರಕರಣದಲ್ಲಿ ನನ್ನ ಚಿಕ್ಕಪ್ಪಂದಿರಾದ ಗೋವಿಂದಪ್ಪ, ಓಂಕಾರಪ್ಪ ಮತ್ತು ಮಹೇಶ್ ಇವರುಗಳು ಇದೇ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದಾರೆ ಮತ್ತು ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಇಬ್ಬರು ಸಹೋದರಿಯರು ಮತ್ತು 6 ಜನ ಸಹೋದರರು ಇದ್ದಾರೆ

ಎಂದರೆ ನಿಜ. ನನ್ನ ತಂದೆ ಒಡಹುಟ್ಟಿದವರು ಒಟ್ಟು 8 ಜನರು ಎಂದರೆ ನಿಜ. ನಿಡಿ-58 ರ ದಾಖಲೆಗೆ ನನ್ನ ತಂದೆಯ ಸಹೋದರಿಯರು ಪಕ್ಷಗಾರರಾಗಿಲ್ಲ ಎಂದರೆ ನಿಜ.

1994 ಕ್ಕೂ ಮೊದಲು ನಮ್ಮ ಅತ್ತೆಯರಿಗೆ ಹಿಸ್ಸೆ ಕೊಟ್ಟಿಲ್ಲ. ನನ್ನ ಅತ್ತೆಯರು ಇದೇ ಕೇಸಿನಲ್ಲಿ ತಮಗೆ ಭಾಗ ಬರಬೇಕೆಂದು ಲಿಖಿತ ಹೇಳಿಕೆ ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಡಿ-58 ರ ದಾಖಲೆಗೆ ದಿನಾಂಕ 13-07-2008 ರಲ್ಲಿ ನಮ್ಮ ಊರಿನಲ್ಲಿ ಆಗಿದೆ. ನಿಡಿ-58 ರ ದಾಖಲೆಯನ್ನು ಬೆಳಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ ಬರೆಯಲಾಗಿದೆ. ಈ ಹಿಂದೆ ವಿಚಾರಣೆ ಮಾಡುವ ಸಮಯದಲ್ಲಿ ನಿಡಿ-58 ರ ದಾಖಲೆಯನ್ನು ಹಾಜರುಪಡಿಸಬಹುದಿತ್ತು ಎಂದರೆ ನಿಜ. ಆದರೆ ಆ ಸಮಯಕ್ಕೆ ನಿಡಿ-58 ರ ದಾಖಲೆ ಸಿಕ್ಕಿರಲಿಲ್ಲ ಆದ್ದರಿಂದ ಹಾಜರುಪಡಿಸಿರಲಿಲ್ಲ.

ನಮ್ಮ ಒಟ್ಟು ಕುಟುಂಬದಲ್ಲಿ 6 ಮನೆಗಳಿವೆ ಎಂದರೆ ಸಾಕ್ಷಿಯು 4 ಮನೆಗಳು ನನ್ನ ತಂದೆ ಹೆಸರಿನಲ್ಲಿ ಮತ್ತು ಇನ್ನೆರೆಡು ಮನೆಗಳು ಬೇರೆಯವರ ಹೆಸರಿನಲ್ಲಿದೆ ಎಂದು ನುಡಿದಿರುತ್ತಾರೆ. ಒಟ್ಟು 6 ಮನೆಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ಪ್ರತ್ಯೇಕವಾಗಿ ವಾಸ ಇದ್ದಾರೆ. ಇದುವರೆಗೂ ಅಳತೆ ಮಾಡಿಸಿ ಜಮೀನುಗಳಲ್ಲಿ ಹಂಚಿಕೊಂಡಿಲ್ಲ ಎಂದರೆ ನಿಜ, ಜುಬಾನೆ ಹಿಸ್ಸಾ ಪತ್ರದ ಮೇರೆಗೆ ಹಂಚಿಕೊಂಡಿದ್ದೇವೆ. ಆನಂತರವೂ ಸಹ ಅಳತೆ ಮಾಡಿಸಿಲ್ಲ.

ನಿಡಿ-57 ರ ದಾಖಲೆಯ ಪ್ರಕಾರ ನನ್ನ ಅಜ್ಜ ಬೊಗಪ್ಪ ಮರಣ ಹೊಂದಿದ ನಂತರ ವಾದಿ ಹಿರಿಯ ಮಗನಾಗಿದ್ದರಿಂದ ನನ್ನ ಅಜ್ಜನ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದರು ಎಂದರೆ ನಿಜ. ಸಾಕ್ಷಿಯು ಮುಂದುವರೆದು ನನ್ನ ಅಜ್ಜಂದಿರು ಮೊದಲೇ ವಿಭಾಗ ಮಾಡಿಕೊಂಡಿದ್ದರು. ನಾನು ನನ್ನ ತಂದೆ ಆಸ್ತಿಯಲ್ಲಿ ಭಾಗ ಕೇಳಿ ಈ ಹಿಂದೆ ದಾವೆ ಸಲ್ಲಿಸಿದ್ದೆ ಎಂದರೆ ನಿಜ. ನಾನು ಸಲ್ಲಿಸಿದ್ದ ದಾವೆಯಲ್ಲಿ ಎಷ್ಟು ಆಸ್ತಿಗಳಲ್ಲಿ ಭಾಗಾಂಶ ಕೇಳಿದ್ದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವೆ ಸಲ್ಲಿಸುವ ಕಾಲಕ್ಕೆ ನನ್ನ ತಂದೆ ಹೆಸರಿಗೆ 50 ಎಕರೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯನ್ನು ಸಣ್ಣ ಹಿಡುವಳಿದಾರರು ಎಂದು ತೋರಿಸಿಕೊಳ್ಳಲು ಹೂಡಿದ್ದೆ ಎಂದರೆ ಸರಿಯಲ್ಲ. ವಾದಿ ಮಗ ಚಿಕ್ಕಮಗಳೂರಿನ ಕಾಲೇಜಿನಲ್ಲಿ ಪ್ರೊಫೆಸರಾಗಿದ್ದಾರೆ ಎಂದರೆ ನಿಜ.

ಈಗಲೂ ಸಹ ನಾಗೇಶಪ್ಪನವರ ಹೆಸರಿಗೆ 28 ಎಕರೆ ಖಾತೆ ಇದೆ ಎಂದರೆ ನಿಜ. ವಾದಿ ಮಗ ವಿದ್ಯಾಭ್ಯಾಸಕ್ಕಾಗಿ ಸಣ್ಣ ಹಿಡುವಳಿದಾರರೆಂದು ತೋರಿಸಿಕೊಳ್ಳಲು ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 587/1995 ರಲ್ಲಿರುವ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-69 ರ ದಾಖಲೆಯ ಪ್ರಕಾರ 1996 ರಲ್ಲಿ ವಾದಿ ಹೆಸರಿಗೆ ಆಗಿದೆ ಎಂದರೆ ನಿಜ, ಸದರಿ ಆಸ್ತಿಯನ್ನು ಸಹ ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ನಿಜ.

ನನ್ನ ತಂದೆ ಮರಣ ಹೊಂದಿದ ನಂತರ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ನಾನು ಅರ್ಜಿ ಸಲ್ಲಿಸಿದಾಗ ನಾಗೇಶಪ್ಪನವರು ಶಿರಸ್ತೇದಾರರ ಮುಂದೆ ತಕರಾರು ಸಲ್ಲಿಸಿದ್ದರು ಎಂದರೆ ನಿಜ. ನಾನು ಹಾಜರುಪಡಿಸಿರುವ ನಿಡಿ-72 ರಿಂದ 107 ರ ದಾಖಲೆಗಳ ಪ್ರಕಾರ ಇರುವ ಆಸ್ತಿಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆಗೆ ಪ್ರತ್ಯೇಕವಾಗಿ ಆದಾಯ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ತಂದೆ ಒಟ್ಟು ಕುಟುಂಬದ ಯಜಮಾನನಾಗಿದ್ದ ಕಾರಣ ನಿಡಿ-59 ರಲ್ಲಿ ಗುರುಸಿರುವ ದಾಖಲೆಯ ಪ್ರಕಾರ ಫ್ಲೋರ್ ಮಿಲ್ ಪರವಾನಿಗಿ ಸಿಕ್ಕಿತು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ 1994 ಅಥವಾ 2008 ರಲ್ಲಿ ಯಾವುದೇ ವಿಭಾಗ ಆಗಿಲ್ಲ, ಇದುವರೆಗೂ ಒಟ್ಟು ಕುಟುಂಬದಲ್ಲೇ ಇದ್ದೇವೆ ಎಂದರೆ ಸರಿಯಲ್ಲ. ನಿಡಿ-58 ರ ದಾಖಲೆಯನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.

ಕಡೂರು.